

ಅನೂಹ್ಯ ಹೊಯ್ದಾಟಗಳನ್ನು ಸೂಚಿಸುತ್ತವೆ. ಹೀಗೆ ಬರೆಯುವ ಅವಕಾಶವೂ ಇಲ್ಲದೆ ಹೋಗಿದ್ದರೆ ಏನೆಲ್ಲ ಅನಾಹುತ ಸಂಭವಿಸುತ್ತಿತ್ತೊ? ನನ್ನ ಪ್ರಕಾರ, ಯಾವ ದೇಶದಲ್ಲಿ ಗೋಡೆಗಳು ಸ್ವಚ್ಛವಾಗಿರುವವೊ ಅಲ್ಲಿ ಕ್ರಾಂತಿ ಕಿಚ್ಚಿಲ್ಲ ಅಥವಾ ಕ್ರಾಂತಿಯನ್ನು ಹತ್ತಿಕ್ಕಲಾಗಿದೆ ಎಂದರ್ಥ. ಮಕ್ಕಳಿರುವ ಮನೆಯ ಗೋಡೆಗಳ ಮೇಲೆ ಮಕ್ಕಳ ಕಾಟುಕಿಚ್ಚಿಲ್ಲದಿದ್ದರೆ ಅವರ ಸೃಜನಶೀಲ ಸ್ವಾತಂತ್ರ್ಯ ಹರಣವಾಗಿರುತ್ತದೆ. ಗೋಡೆಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳುವ ವ್ಯಸನವುಳ್ಳ ದೇಶಗಳಲ್ಲೂ ಗೋಡೆಬರಹಗಳನ್ನು ನೋಡಿರುವೆ. ಪ್ಯಾಲೆಸ್ತೇನಿನ ಗೋಡೆ ಬರಹಗಳಂತೂ ಆ ದೇಶ ಹಾಯುತ್ತಿರುವ ಸಂಕಟಗಳನ್ನು ಹೇಳುತ್ತವೆ. ದೇಶ ಸುತ್ತು ಕೋಶ ಓದು ಗಾದೆಯಿದೆ. ಆದರೆ, 'ದೇಶ ಸುತ್ತವಾಗ ಗೋಡೆಬರಹ ಓದು' ಎಂದು ಹೊಸಗಾದೆ ಕಟ್ಟಬಹುದು. ಗೋಡೆಸಾಹಿತ್ಯದಲ್ಲಿ ಸಮಾಜದೊಳಗಿನ ಅಮೃತ ವಿಷಗಳೆರಡೂ ಚೆಲ್ಲಿರುತ್ತವೆ. ಅವನ್ನು ಓದಿ ಮಿಡಿಯದೆ, ಅವುಗಳಿಂದ ಎಚ್ಚೆತ್ತುಕೊಳ್ಳದೆ ಹೋದ ಎಷ್ಟೊಂದು ಸರ್ಕಾರ-ಸಮಾಜಗಳು ಚರಿತ್ರೆಯಲ್ಲಿ ದಿಕ್ಕೆಟ್ಟು ಹೋಗಿವೆ? ಗೋಡೆಬರಹದಂತೆ ಇರುವ ಸತ್ಯಗಳನ್ನು ಓದದೆ ಎಷ್ಟೊಂದು ಜನ ತಮ್ಮ ಬಾಳುವೆ ಕೆಡಿಸಿಕೊಂಡಿದ್ದಾರೆ?

ನನ್ನ ಕಾರಿನ ಹಿಂದಿದ್ದ ವಾಹನದವನು 'ಏನಯ್ಯಾ, ನಿದ್ದೆ ಮಾಡ್ತಿದೀಯಾ?' ಎಂಬಂತೆ ಜೋರಾಗಿ ಹಾರ್ನ್ ಮಾಡಿದ. ಕೂಡಲೇ ವಿಷಾದಯೋಗದಿಂದ ಎಚ್ಚೆತ್ತೆ. ಗಾಳೆಮ್ಮನ ಗುಡಿಯ ತೇರು ಎಳೆದಾಯಿತು ಅನಿಸುತ್ತದೆ. ಎರಡು ತಾಸಿನಿಂದ ಕಟ್ಟಿಕೊಂಡ ಟ್ರಾಫಿಕ್ ಕ್ಲಿಯರಾಗುತ್ತ, ನನ್ನ ಮುಂದಿದ್ದ ಕುರಿವಾಹಕ ವ್ಯಾನು ಕದಲಿತು. ಟಗರು ಕೊನೆಯ ಸಲವೆಂಬಂತೆ ನನ್ನತ್ತ ನೋಡಿ ನಕ್ಕಂತಾಯಿತು. ಸಂಜೆ ವಿಶ್ವವಿದ್ಯಾಲಯದಿಂದ ಮರಳಿ ಬರುವಾಗ ಗಮನಿಸಿದೆ. ಜಾತ್ರೆ ಮುಗಿದಿತ್ತು. ಅಂಗಡಿಯವರು ಟೆಂಟುಗಳನ್ನು ಕೀಳುತ್ತಿದ್ದರು. ಖಾಲಿಬಿದ್ದ ರಸ್ತೆಯ ಮೇಲೆ ಜಾತ್ರೆಯ ಅವಶೇಷಗಳಾದ ಬಾಳೆಕಂಬ ಹೂವು ಚೆಲ್ಲಾಡಿದ್ದವು. ಅವು, ಬೆಳಿಗ್ಗೆ ಕುರಿಯ ನೇರ-ದಿಟ್ಟ ಮುಖಾಮುಖಿಯಿಂದ ಹುಟ್ಟಿದ ತಲ್ಲಣಗಳು ನನ್ನ ಮನಸಿನ ಆಗಸವನ್ನು ಆವರಿಸಿಕೊಂಡು ಉಳಿದಿರುವ ಮೋಡಗಳಂತೆ. ●